


‘ಬಾಲಪ್ರಪಂಚ’ ಮತ್ತು ‘ವಿಜ್ಞಾನ ಪ್ರಪಂಚ’ದ ನಾಲ್ಕು ಸಂಪುಟಗಳು. ‘ಕಸ್ತೂರಿ’ ಪತ್ರಿಕೆ ಎಂದೊಡನೆಯೇ ಅದರ ಜೊತೆಗೇ ಲಗತ್ತಾಗುತ್ತಿದ್ದ ಹೆಸರು ಪಾ.ವೆಂ. ಆಚಾರ್ಯ. ಕಸ್ತೂರಿಯ ಸಂಪಾದಕರು. ಅವರನ್ನು ವೈಯಕ್ತಿಕ ನೆಲೆಯವರಲ್ಲಿ ನೋಡಿದವರಿಗೂ ಅದೇ ಕುತೂಹಲ ಕಾಡುತ್ತಿತ್ತು. ಇಂಥ ನರಪೇತಲ ಮನುಷ್ಯನ ತಲೆಯಲ್ಲಿ ವಿಶ್ವಕೋಶ ಕುಳಿತಿದೆಯೆ? ಎಂದು. ಪಾ.ವೆಂ. ಆಚಾರ್ಯ ಅವರು ಬೇರೆ ಬೇರೆ ಹೆಸರಿನಿಂದ ಕಸ್ತೂರಿಗೆ ಬರೆದರು. ಆದರೆ ಆ ಬರವಣಿಗೆಯ ಶೈಲಿ ನೋಡಿ ಜಾಡು ಹಿಡಿದವರಿಗೆ ಥಟ್ಟನೆ ತಿಳಿಯುತ್ತಿತ್ತು; ಮುರಳೀಧರ, ಲಾಂಗೂಲಾಚಾರ್ಯ, ರಾಧಾಕೃಷ್ಣರಾವ್, ಪಿ.ವಿ. ಆಚಾರ್ಯ ಎಲ್ಲವೂ ಅವರೇ ಎಂದು. ಅವರು ವಿಜ್ಞಾನದ ವಿಷಯವಾಗಿ ವಿಶೇಷವಾಗಿ ವೈದ್ಯಕೀಯ ಕ್ಷೇತ್ರದಲ್ಲಿ ಏನಾದರೂ ಸಣ್ಣ ಅನುಮಾನ ಬಂದರೆ ಸೀದಾ ಆಯಾ ವಿಭಾಗದ ಪ್ರೊಫೆಸರುಗಳ ಜೊತೆ ಮಾತನಾಡಿ ಪರಿಹರಿಸಿಕೊಳ್ಳುತ್ತಿದ್ದರು. ಪಾ.ವೆಂ. ವಿಜ್ಞಾನದ ಎಲ್ಲ ಪ್ರಕಾರಗಳಲ್ಲೂ ಬರೆದರು. ಸಸ್ಯ, ಪ್ರಾಣಿ, ಮನೋವಿಜ್ಞಾನ, ಖಗೋಳವಿಜ್ಞಾನ, ಪದಾರ್ಥವಿಜ್ಞಾನ, ಭೂವಿಜ್ಞಾನ, ಆನ್ವಯಿಕ ವಿಜ್ಞಾನ, ತಂತ್ರಜ್ಞಾನ ಎಲ್ಲವನ್ನೂ ಜೀರ್ಣಿಸಿಕೊಂಡು ಬರೆದರು. ಅಷ್ಟು ಚೈತನ್ಯ ಅವರಿಗಿತ್ತು. ಓದಿದ್ದು ಬರೀ ಹೈಸ್ಕೂಲ್‌ವರೆಗೆ. ಆ ಕಾಲಕ್ಕೆ ಮಾನವ, ಯಂತ್ರದ ಆಳಾಗುವನೆ? ಎಂದು ಬರೆದರು. ವಿಶ್ವಸೃಷ್ಟಿ ಹೇಗಾಯಿತು? ಎಂಬುದಕ್ಕೆ ತಾವೂ ಬೆರಗುಪಟ್ಟು, ಓದುಗರನ್ನೂ ವಿಸ್ಮಯಗೊಳಿಸಿದರು. ನೀವು ಬಲ ಮಿದುಳಿನವರೋ, ಎಡ ಮಿದುಳಿನವರೋ ಎಂದು ಕೇಳಿ, ಓದುಗರು ಲೇಖನ ಓದಿದ ಮೇಲೆ ತಮ್ಮ ಬಗ್ಗೆಯೇ ವಿಮರ್ಶಿಸಿಕೊಳ್ಳತೊಡಗಿದರು. ಸತ್ಯೇನ್ ಬೋಸ್, ಹಾಲ್ಡೇನ್ ಬಗ್ಗೆ ಬರೆದರು. ಅತಿ ಕ್ಲಿಷ್ಟ ಎನ್ನಬಹುದಾದ ಕಾರ್ಬನ್ ಕಾಲನಿರ್ಣಯದ ಬಗ್ಗೆಯೂ ಲೀಲಾಜಾಲವಾಗಿ ಬರೆದರು. ಅರಗಿಸಿಕೊಳ್ಳದ ವಿಜ್ಞಾನವೇ ಇಲ್ಲ ಎಂದು ತೋರಿಸಿಕೊಟ್ಟರು. ಸಂಸ್ಕೃತ ತಿಳಿದಿದ್ದರಿಂದ ಕನ್ನಡದಲ್ಲಿ ಕೆಲವು ಸಮಾನಾರ್ಥಕ ಪದಗಳನ್ನು ಟಂಕಿಸಿದರು. ಓದನ್ನು ಸುಭಗಗೊಳಿಸಿದರು. ಅವರ ವಿಜ್ಞಾನ ಬರಹಗಳನ್ನು ಸಂಗ್ರಹಿಸಿದ ‘ವಿಜ್ಞಾನ ವಿಸ್ಮಯ’ ಕೃತಿ ಹೊರಬಂದಿದೆ. ವಿಶೇಷವೆಂದರೆ ಈ ಯಾವ ಲೇಖನಗಳನ್ನೂ ಕ್ರಮವಾಗಿಯೇ ಓದಬೇಕೆಂದಿಲ್ಲ. ಯಾವಾಗ ಓದಿದರೂ ಆ ವಿಷಯದ ಸ್ವಾದಿಷ್ಟ ನಿಮ್ಮದಾಗುತ್ತದೆ. ಕೈ ಪಳಗಿದವರ ಬರಹದ ಸ್ವರೂಪವೇ ಹೀಗೆ.

ಅವರು ಗಣಿತ ಬೋಧಕರು. ಆದ್ದರಿಂದ ಶಬ್ದಗಳ ಬಳಕೆಯಲ್ಲಿ ಬಹಳ ಎಚ್ಚರಿಕೆ ವಹಿಸಿದರು. ಕನ್ನಡಕ್ಕೆ ‘ಶ್ರೀನಿವಾಸ ರಾಮಾನುಜಂ’, ‘ಐನ್‌ಸ್ಟೈನ್ ಬಾಳಿದರಿಲ್ಲಿ’, ‘ಕೃಷ್ಣವಿವರಗಳು’ ಸೇರಿದಂತೆ 50 ಕೃತಿಗಳನ್ನು ಕೊಟ್ಟವರು. ಕನ್ನಡದ ಸತ್ವವನ್ನು ಹೀರಿ ಪರಿಪುಷ್ಟವಾದ ಬರಹಗಳು ಅವು. ಅವರು ತಪ್ಪಿಯೂ ‘ಎಂಬುವ’ ಎಂದು ಬರೆಯದೆ ‘ಎಂಬವ’ ಪ್ರಯೋಗವೇ ಸರಿ ಎಂದವರು. ಇವೆಲ್ಲದಕ್ಕಿಂತ ಕಳಶಪ್ರಾಯವಾಗಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಹೊರಬಂದ ವಿಶ್ವಕೋಶದ 14 ಸಂಪುಟಗಳಲ್ಲಿ ಇವರು ವಿಜ್ಞಾನ ಲೇಖನಗಳನ್ನು ತಿದ್ದಿ ತೀಡಿದ ಪರಿ ವಿಸ್ಮಯ ತರುತ್ತದೆ. ಒಂದರ್ಥದಲ್ಲಿ ಎಲ್ಲ ಲೇಖನಗಳನ್ನು ಮರು ರೂಪಿಸಿದ್ದಾರೆ. ಒಮ್ಮೆ ಯಾರೋ ಓದುಗರು ‘ನಿಮ್ಮ ಬರವಣಿಗೆ ತುಂಬ ಕ್ಲಿಷ್ಟ’ ಎಂದಾಗ, ಅಷ್ಟೇ ತೀವ್ರವಾಗಿ ‘ಬಿಡಿ, ಇದು ನಿಮಗಲ್ಲ’ ಎನ್ನುತ್ತಿದ್ದರು. ಇಲ್ಲಿ ಪು.ತಿ.ನ. ನೆನಪಾಗುತ್ತಾರೆ. ಕವಿ ನಿಸಾರ್ ಅಹಮದ್ ಅವರೊಡನೆ ನಾನು ಪು.ತಿ.ನ. ಅವರ ಮನೆಗೆ ಹೋದಾಗ, ನಿಸಾರ್ ಅವರು ಮೆಲ್ಲನೆ – ‘ಸರ್, ನಿಮ್ಮ ಕಾವ್ಯವನ್ನು ಅರ್ಥಮಾಡಿಕೊಳ್ಳಬೇಕಾದರೆ, ನಮಗೆ ಸಿದ್ಧಿ ಬೇಕು’ ಎಂದಿದ್ದರು. ಪು.ತಿ.ನ. ಪ್ರಶಾಂತವಾಗಿ ‘ಮುತ್ತು ಬೇಕೆಂದರೆ ಸಮುದ್ರದ ಆಳಕ್ಕೆ ಮುಳುಗಬೇಕು, ಹೆಕ್ಕಬೇಕು. ಅದು ಅಲೆಯಲ್ಲಿ ತೇಲುವುದಿಲ್ಲ’ ಎಂದಿದ್ದರು.

ಅಡ್ಯನಡ್ಕ ಕೃಷ್ಣಭಟ್ ಅವರು ಮುಲ್ಕಿ ವಿಜಯ ಕಾಲೇಜಿನಲ್ಲಿ ಇದ್ದಾಗಲೇ ವಿಜ್ಞಾನ ಬರಹದತ್ತ ಆಕರ್ಷಿತರಾಗಿದ್ದವರು. ‘ಫಿಸಿಕ್ಸ್ ಮತ್ತು ಐನ್‌ಸ್ಟೈನ್’, ‘ಗ್ರಹಣ’, ‘ಗಗನಯುಗ’ ಹಾಗೂ ಸಿ.ವಿ. ರಾಮನ್ ಕುರಿತು ಅವರು ಬರೆದ ಕೃತಿಗಳು ಈಗಲೂ ನಿರೂಪಣೆಗೆ ಹೆಸರಾದವು. ನಿರಂಜನರ ಸಂಪಾದಕತ್ವದಲ್ಲಿ ಹೊರಬಂದ ‘ಜ್ಞಾನ ಗಂಗೋತ್ರಿ’ ಕಿರಿಯರ ವಿಶ್ವಕೋಶದಲ್ಲಿ ವಿಜ್ಞಾನ ಲೇಖನಗಳನ್ನು ಸಂಪಾದಿಸಿದವರು ಅವರು. ಇದನ್ನು ಓದಿದ ಯಾರಿಗಾದರೂ ‘ಸಂಪಾದನೆ’ ಏನು ಎಂಬುದು ಹೊಳೆಯುತ್ತದೆ. ಈಗಿನ ತಲೆಮಾರಿನವರಿಗೆ ಅವು ಎಷ್ಟರಮಟ್ಟಿಗೆ ಪ್ರಭಾವ ಬೀರಿವೆಯೋ ತಿಳಿದಿಲ್ಲ. ಇವರು ಮತ್ತು ಜೆ.ಆರ್. ಲಕ್ಷ್ಮಣರಾವ್ ಅವರು ಸೇರಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನಿಂದ ಹೊರತಂದ ‘ಇಂಗ್ಲಿಷ್ ಕನ್ನಡ ವಿಜ್ಞಾನ ಶಬ್ದಕೋಶ’ ಬರಹಗಾರರ ಕೈಯ ಬಳಿಯೇ ಇರಬೇಕು. ಜೊತೆಗೆ ಪದನಿಷ್ಪತ್ತಿಗಳನ್ನು ಕೂಡ ತೋರಿಸಿಕೊಟ್ಟು ವಿಜ್ಞಾನ ಬರವಣಿಗೆಯ ಮಾರ್ಗವನ್ನು ಸುಗಮಗೊಳಿಸಿದವರು.


ಜಿ.ಟಿ. ನಾರಾಯಣರಾವ್




## ‘ಮಿಸ್ಸಿಂಗ್ ಲಿಂಕ್’ ಇದೆಯಾ? ‘ಹಸುರು ಹೊನ್ನು’?

ವಿಜ್ಞಾನಪ್ರಿಯರು, ಲೇಖಕರು, ಜನಸಾಮಾನ್ಯರು ಪುಸ್ತಕದ ಅಂಗಡಿಗಳಲ್ಲಿ ಮೊದಲು ತೇಜಸ್ವಿಯವರ ಪುಸ್ತಕಗಳನ್ನು ಕೇಳುತ್ತಾರೆ. ‘ಮಿಸ್ಸಿಂಗ್ ಲಿಂಕ್’ ಇದೆಯಾ? ಎನ್ನುತ್ತಾರೆ. ಇದ್ದರೆ ಸರಿ, ಇಲ್ಲದಿದ್ದರೆ ‘ಪರಿಸರದ ಕಥೆ’ ಜೊತೆಗೆ ‘ಕರ್ವಾಲೊ’ ಬೇಕು ಎನ್ನುತ್ತಾರೆ. ಇಷ್ಟನ್ನೂ ಕೈಗೆತ್ತಿಕೊಂಡಾಗ ಅವರ ಮುಖದಲ್ಲಿ ಆನಂದ ಎದ್ದುಕಾಣುತ್ತದೆ. ತೇಜಸ್ವಿ ವಿಜ್ಞಾನ ಓದಲಿಲ್ಲ, ಕ್ಯಾಮೆರಾ ಹಿಡಿದು ಕಾಡುಮೇಡುಗಳಲ್ಲಿ ಅಲೆದಾಡಿದರು, ಕಂಡ ಕಂಡ ಪಕ್ಷಿಗಳನ್ನೆಲ್ಲ ಕ್ಯಾಮೆರಾದಲ್ಲಿ ಸೆರೆಹಿಡಿದರು. ಪ್ರತಿಯೊಂದನ್ನೂ